

ಅದಕ್ಕಾಗಿ ನಿಮ್ಮನ್ನೆಲ್ಲಾ ಇಂದು ಕರೆದಿದ್ದೇನೆ. ನಮ್ಮದೇ ಆದ ಯೂನಿಯನ್ ಒಂದಿದೆ. ಅದು ಹೆಸರಿಗೆ ಮಾತ್ರವಾಗಿತ್ತು. ಈಗ ಅದರ ಮೂಲಕ ಸಮಿತಿಗೆ ದೂರು ಸಲ್ಲಿಸೋಣ. ದೂರಿನ ಕರಡನ್ನು ನಿಮಗೆಲ್ಲಾ ಈಮೇಲಿನಲ್ಲಿ ಕಳುಹಿಸುತ್ತೇನೆ.”

ಮೊದಲಿಗೆ ಕೈ ಎತ್ತಿದ್ದು ಟರ್ನರ್ ನ ಮಾಜಿ ಹೆಂಡತಿ ಈವಾನ್. “ಪ್ರಾಯಶಃ ನನ್ನಷ್ಟು ಅವನ ದೌರ್ಜನ್ಯವನ್ನು ಸಹಿಸಿದವರು ಮತ್ತಾರೂ ಇಲ್ಲ. ನಾನು ಎಲ್ಲದಕ್ಕೂ ಸಿದ್ಧ.” ಇಬ್ಬರ ಮಾತುಗಳನ್ನೂ ಕೇಳಿ ನಯನಾಳಿಗೆ ಸಿಡಿಲು ಹೊಡೆದಂತಾಯಿತು. ಯಾರಿಗೂ ಹೇಳದೆ ಅಲ್ಲಿಂದ ಹೊರಟಳು. ನೆರೆದಿದ್ದವರೆಲ್ಲಾ ನಗುತ್ತಾ ಅವಳತ್ತ ನೋಡಿದರು. ಸರ್ವಾನುಮತದಿಂದ ಮಸೂದೆ ಅಂಗೀಕೃತವಾಯಿತು.

ಸಭೆಯಿಂದ ಹೊರಟ ನಯನಾ ಪ್ರಯೋಗಾಲಕ್ಕೆ ಬಂದಳು. ಅಲ್ಲಿ ಟರ್ನರ್ ಇರಲಿಲ್ಲ. ಅವನಿಗೆ ಫೋನ್ ಮಾಡಿ ವಿಷಯ ತಿಳಿಸಿದಳು.

ಅವನು, “ಇವರಾರೂ ನನ್ನನ್ನು ಅಲ್ಲಾಡಿಸಲಾಗುವುದಿಲ್ಲ. ನಾನು ನೋಡಿಕೋತೀನಿ ಬಿಡು. ಯಾರಾದರೂ ಮಾತಾಡುವುದಕ್ಕೆ ಬಂದರೆ ಸುಮ್ಮನಿರು. ಆ ಸಮಿತಿಯವರು ಕರೆಸಿ ಕೇಳಿದರೆ ಏನೋ ಹೇಳಿ ಜಾರಿಕೋ . ಅಥವಾ ಒಂದು ಪಕ್ಷ ನೀನು ನಿನ್ನ ಆತ್ಮಸಾಕ್ಷಿಯಾಗಿ ನಿಜ ಹೇಳಿದ್ದೆ ಆದರೂ ಸರಿಯೇ. ಮುಂದೇನು ಮಾಡಬೇಕು ಎನ್ನುವುದು ನನಗೆ ಗೊತ್ತಿದೆ. ಅವರವರ ಜೀವನ ಅವರವರ ಕೈಯ್ಯಲ್ಲಿ ಅಲ್ಲವೇ?” ನಯನಾಳಿಗೆ ಸ್ವಲ್ಪ ಗಾಬರಿಯೇ ಆಯಿತು. ಆತ್ಮ ಸಾಕ್ಷಿಯಾಗಿ ನಿಜ ಹೇಳುವುದೇ? ಜನ ಏನಂದುಕೊಂಡಾರು! ಅಲ್ಲದೆ ಈಗ ಟರ್ನರ್ ಕಳಚಿಕೊಳ್ಳಲು ಮುಂದಾಗಿದ್ದಾನೆ ಎನಿಸಿತು.

ಎರಡು ದಿವಸಗಳ ನಂತರ ದೂರಿನ ಕರಡು ಈಮೇಲ್ ಮೂಲಕ ತಲಪಿತು. ಅದನ್ನು ನೋಡದೇ ಡಿಲೀಟ್ ಮಾಡಿದಳು ನಯನಾ.

ದೂರಿಗೆ ಸಹಿಮಾಡಿದ ಯಾರೋ ವೃತ್ತಪತ್ರಿಕೆಯೊಂದಕ್ಕೂ ವಿಷಯ ತಿಳಿಸಿದರು. ಎರಡು ವಾರಗಳಲ್ಲಿ ವರದಿಗಾರ್ತಿ ಒಬ್ಬಳು ಪ್ರಯೋಗಾಲಯಕ್ಕೆ